

# ಕುಬ್ಜ ನೀರುಕುದುರೆ!

ನೀರುಕುದುರೆಗಳು ಎಲ್ಲರಿಗೂ ಗೊತ್ತು. ಆದರೆ, ಈಗ ಸುದ್ದಿಯಲ್ಲಿರುವುದು ಕುಬ್ಜ ನೀರುಕುದುರೆಗಳು! ಇವುಗಳ ಆಕಾರ ಎಷ್ಟು ಪುಟ್ಟದೆಂದರೆ, ನಮ್ಮ ಅಂಗೈನಲ್ಲಿ ಅನೇಕ ನೀರುಕುದುರೆಗಳು ಹಿಡಿಸಬಲ್ಲವು! ಜಪಾನ್‌ನ ಸಮುದ್ರಗಳಲ್ಲಿ ಕಂಡುಬಂದಿರುವ ಇವು ಜಾರುವ ವಿದ್ಯೆಯಲ್ಲಿ ಪಳಗಿವೆಯಂತೆ.

■ ಕೆ.ಎಸ್. ಸೋಮೇಶ್ವರ

ನೀರು ಕುದುರೆಗಳ ಬಗ್ಗೆ ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುತ್ತದೆ. ಈ ಜಲಚರದ ಆಕಾರ, ಅದರ ಅನನ್ಯತೆ ಇವೆಲ್ಲವನ್ನು ಈಗಾಗಲೇ ಎಲ್ಲರೂ ಓದಿ ತಿಳಿದಿರುವುದೇ ಆಗಿದೆ. ಈಗ ಹೇಳಹೊರಟಿರುವುದು ಜಪಾನಿನ ಸಮುದ್ರ ಪ್ರದೇಶದಲ್ಲಿ ಇತ್ತೀಚೆಗೆ ಕಂಡು ಬಂದಿರುವ ಕುಬ್ಜ ನೀರುಕುದುರೆಗಳ ಬಗ್ಗೆ. ಸಂಶೋಧಕರು ಇದಕ್ಕೆ ಮಾಡಿರುವ ನಾಮಕರಣ 'ಹಿಪ್ಪೋ ಕ್ಯಾಂಪಸ್ಜ ಪಾಪಿಗು' (ಲ್ಯಾಟಿನ್ ಭಾಷೆಯಲ್ಲಿ ಜಪಾನಿ ಹಂದಿಗೆ 'ಜಪಾಪಿಗು' ಎನ್ನುತ್ತಾರೆ.)

ಈ ನೀರುಕುದುರೆಗಳು ಆಕಾರದಲ್ಲಿ ನೋಡಲು ಸಣ್ಣವಾದರೂ ಅವುಗಳ ಆಟಗಳು ನೀರಿನಲ್ಲಿ ದೊಡ್ಡ ಅಲೆಗಳನ್ನೇ ಹುಟ್ಟುಹಾಕುವಂತಿರುತ್ತವೆ ಎನ್ನುತ್ತಾರೆ ಸಂಶೋಧಕರು. ಇವು ಸಾಮಾನ್ಯ ನಮ್ಮ ತೋರುಬೆರಳಿನ ಅಗಲದಷ್ಟಿರಬಹುದು. ಇತ್ತೀಚೆಗೆ ಸಂಶೋಧಕರು ನೀರುಕುದುರೆಗಳ ಬಗೆಗೆ ಹೆಚ್ಚಿನ ಅಧ್ಯಯನಕ್ಕೆ ಹೊರಟಾಗ ಅವರ ಸಂಶೋಧಕ ಕಣ್ಣುಗಳಿಗೆ ಕುಬ್ಜ ನೀರುಕುದುರೆಗಳು ಗೋಚರವಾದವು. ಅವುಗಳ ಬಗೆಗಿನ ವಿವರಗಳನ್ನವರು **ZooKey** ನಿಯತಕಾಲಿಕದಲ್ಲಿ ಪ್ರಕಟಿಸಿದ್ದಾರೆ.

ಸುಮಾರು 15ರಿಂದ 16 ಮಿಲಿ ಮೀಟರ್ ಉದ್ದವಿರುವ ಅವು ಅದೇ ರೀತಿಯ ಇನ್ನೂ ಐದಾರು ಕುಬ್ಜ ಜಾತಿಯ ಗುಂಪಿಗೆ ಸೇರುತ್ತದೆ. ಈ ಆಕರ್ಷಕ ಜೀವಿಗಳು ಬಹಳಷ್ಟು ಕಾಲ ವಿಜ್ಞಾನಿಗಳ ಸೂಕ್ಷ್ಮದರ್ಶಕ ಕಣ್ಣುಗಳಿಗೆ ಸಿಗದೆ, ಇತರೆ ಜಲಚರಗಳಾದ ಹವಳ, ಶೈವಲ (ಆಲ್ಗೆ–ಪಾಚಿ) ಅವುಗಳೊಂದಿಗೆ ಬೆರೆತಿರುತ್ತಿದ್ದವು. ಅವುಗಳ ಕುಬ್ಜತೆಯೇ ಅವುಗಳಿಗೆ ಸುಲಭವಾಗಿ ಜಾರಿಕೊಳ್ಳುವ ಶಕ್ತಿ ಮತ್ತು ಗುಣ ನೀಡಿದೆ. ಅವುಗಳ ಆಕಾರದ ಬಗ್ಗೆ ಒಂದು ವಾಕ್ಯದಲ್ಲಿ ಹೇಳಬೇಕೆಂದರೆ– ನಮ್ಮ ಅಂಗೈನಲ್ಲಿ ಅನೇಕ ನೀರುಕುದುರೆಗಳನ್ನು ಹಿಡಿದಿಟ್ಟುಕೊಳ್ಳಬಹುದು. ಆದರೆ, ಅವು ಅಂಗೈನಿಂದ ಸುಲಭವಾಗಿ ಜಾರಿಕೊಳ್ಳುತ್ತವೆ ಎನ್ನುವುದನ್ನೂ ನೆನಪಿನಲ್ಲಿಡಬೇಕು.

ಸಂಶೋಧಕರು ಹೇಳುವಂತೆ ಈ ಪುಟಾಣಿಗಳಿಗೆ ಒಂದು ಜೊತೆ ದೊಡ್ಡ ರೆಕ್ಕೆಯ ರೀತಿಯಲ್ಲಿ ಬೆನ್ನುಹುರಿ ಇದ್ದು ಅದು ಬೆನ್ನಿನ ಮೇಲ್ಭಾಗದಲ್ಲಿ ಕಾಣುತ್ತದೆ. ಅದೇ ರೀತಿಯ ಉಳಿದ ಕುಬ್ಜ ನೀರುಕುದುರೆಗಳಿಗೆ ಈ ಬೆನ್ನುಹುರಿ ಎರಡು ಜೊತೆ ಇರುತ್ತದಂತೆ. ಅದಲ್ಲದೇ ಈ ಜಪಾನ್ ಪಿಗ್‌ಗಳ ಮತ್ತೊಂದು ವಿಶೇಷತೆ ಎಂದರೆ, ಅವುಗಳ ಮೇಲ್ಭಾಗದಲ್ಲಿ ತ್ರಿಕೋಣಾಕಾರದ ಮೂಳೆಯ ಡುಬ್ಬ ಇರುವುದು. ಅದರ ಕೆಲಸ ಏನೆಂಬುದು ಇನ್ನೂ ಸ್ಪಷ್ಟವಾಗಿಲ್ಲವಾದರೂ ಇತರೆ ಪ್ರಾಣಿಗಳಂತೆ ತನ್ನ ಸಖಿಯನ್ನು ಆಕರ್ಷಿಸಲು ಇರಬಹುದು ಎಂದು ಊಹಿಸಲಾಗಿದೆ. ಅವುಗಳ ದೇಹರಚನೆಯ ಇನ್ನೊಂದು ವಿಶೇಷ ಎಂದರೆ ಬಿಳಿ–ಕಂದು ಬಣ್ಣದ ಅಡ್ಡಗೆರೆಗಳ ಹೆಣಿಗೆಯ ರೀತಿಯ ಪಟ್ಟಿ ಬೆನ್ನಿನ ಮೇಲ್ಭಾಗದಲ್ಲಿರುತ್ತದೆ.

ಸಂಶೋಧಕರು ಹೇಳುವಂತೆ ಈ ನೀರುಕುದುರೆಗಳು ತಮ್ಮ ಆಕಾರವನ್ನು ಮೀರಿಸಿದ ಚಟುವಟಿಕೆಯುಳ್ಳ ಜೀವಿಗಳು. ಕ್ಯಾಲಿಫೋರ್ನಿಯದ ಅಕಾಡೆಮಿ ಆಫ್ ಸೈನ್ಸ್‌ನ ಗ್ರಹಾಂ ಶಾರ್ಟ್ ಅವರು ಅಭಿಪ್ರಯಪಟ್ಟಿರುವಂತೆ – 'ಈ ಜೀವಿಗಳು ಅಪರೂಪದವಲ್ಲ. ಪೂರ್ವ ಜಪಾನಿನ ಹಲವು ಸಮುದ್ರ ಪ್ರದೇಶಗಳಲ್ಲಿ ಅವುಗಳನ್ನು ಕಾಣಬಹುದು'.

ಹಲವು ಜಾತಿಯ ನೀರುಕುದುರೆಗಳು ಕಾಲಾಂತರದಲ್ಲಿ ಕಡಿಮೆಯಾಗುತ್ತಿದ್ದರೂ ಅವುಗಳ ಸಂಖ್ಯೆಯಲ್ಲಿ ಅಂತಹ ಏರಿಳಿತ ಕಾಣಬರುತ್ತಿಲ್ಲ. ದೊಡ್ಡ ನೀರುಕುದುರೆಗಳು ಚೀನಾದ ಸಾಂಪ್ರದಾಯಿಕ ಔಷಧಿಗಳ ತಯಾರಿಕೆ ಬಳಕೆಯಾಗುತ್ತಿವೆ ಮತ್ತು ಮತ್ಸ್ಯಾಗಾರಗಳಲ್ಲಿ ನೋಡುಗರನ್ನು ಸೆಳೆಯುವ ಜೀವಿಗಳಾಗಿ ಪ್ರದರ್ಶನಗೊಳ್ಳುತ್ತಿವೆ. ■